ಮಿಸೆಸ್ ಕ್ಲಿಫರ್ಡ್ ತಮ್ಮ ಮಗನ ಭಾವಚಿತ್ರಗಳನ್ನು ನನಗೆ ತೋರಿಸಿದರು. ಅವು ಅವನು ಇಲ್ಲಿಂದ ಹೋಗುವ ಮೊದಲು ತೆಗೆದ ಚಿತ್ರಗಳಾಗಿದ್ದವು. ಆತನ ಹೆಸರು ಫ್ರಾನ್ಸಿಸ್ ಅಥವಾ ಫ್ರಾಂಕ್ ಎಂದು. ಮ್ಯಾಗಿ ತನ್ನ ಹುಟ್ಟುಹಬ್ಬಕ್ಕಾಗಿ ಅವನು ಕಳಿಸಿದ ಚಿತ್ರಗಳ ಅಲ್ಬಮ್ ತಂದಳು. ಅದರಲ್ಲಿ ಸಿಮ್ಲಾದ ಅನೇಕ ಚಿತ್ರಗಳು ಮತ್ತು ಸುತ್ತಮುತ್ತಲಿನ ಬೆಟ್ಟ ಗುಡ್ಡಗಳ ಚಿತ್ರಗಳಿದ್ದವು. ಒಳಗಿನ ಎಡ ಪುಟದಲ್ಲಿ ಅವನು ಮ್ಯಾಗಿಗೆ ಅವಳ ಹುಟ್ಟು ಹಬ್ಬದಂದು 'ಪ್ರೀತಿಯಿಂದ ಅಣ್ಣ ಫ್ರಾಂಕ್' ಎಂದು ಬರೆಯಲಾಗಿತ್ತು.

'ಮ್ಯಾಗಿ, ಮಿ. ಗುಪ್ತಾರಿಗೆ ಆ ಉಂಗುರವನ್ನು ತೋರಿಸು' ಎಂದು ಮಿ. ಕ್ಲಿಫರ್ಡ್ ಹೇಳಿದರು. 'ನಿನ್ನ ಅಣ್ಣ ಉಂಗುರವನ್ನು ಕಳಿಸಿರುವನೇ? ನನಗೆ ಅದನ್ನು ತೋರಿಸು, ಯಾವ ರೀತಿಯ ಉಂಗುರ ಅದು' ಎಂದು ನಾನು ಕೇಳಿದೆ.

'ಅದು ಶಕ್ತಿ ಉಂಗುರ. ಒಬ್ಬ ಯೋಗಿ ಫ್ರಾಂಕ್‌ಗಾಗಿ ಕೊಟ್ಟಿದ್ದು' ಎಂದ ಅವಳು ಆ ಉಂಗುರ ತಂದು ತೋರಿಸುತ್ತಾ 'ಇದರಲ್ಲಿ ನೀವು ಭೂತ ಮತ್ತು ಭವಿಷ್ಯವನ್ನು ಕಾಣಲು ಸಾಧ್ಯವೆ?' ಎಂದು ಕೇಳಿದಳು.

ವಜ್ರದ ಹರಳಿನ ಬಗ್ಗೆ ಕೇಳಿದ್ದೆ. ಉಂಗುರದ ಒಳಗೆ ವಜ್ರವನ್ನು ಇಡಲಾಗಿತ್ತು. ನಾನು ಅದನ್ನು ತೆಗೆದುಕೊಂಡು ನೋಡಿದೆ.

ಇದನ್ನು ಫ್ರಾಂಕ್ ಕಳಿಸುವಾಗ ಪತ್ರದಲ್ಲಿ ತಿಳಿಸಿದ್ದ. ಯಾವುದೇ ಒಬ್ಬ ದೂರದಲ್ಲಿರುವ ಮನುಷ್ಯನನ್ನು ನೆನಪಿಸಿಕೊಂಡು ಈ ಉಂಗುರವನ್ನು ನೋಡಿದರೆ ಅದರಲ್ಲಿ ಆತನನ್ನು ಕಾಣಲು ಸಾಧ್ಯವಾಗಬಹುದು ಮತ್ತು ಅವನು ಏನು ಮಾಡುತ್ತಾನೆ ಎಂಬುದನ್ನು ತಿಳಿಯಬಹುದು ಎಂದು ತಿಳಿಸಿದ್ದ ಎಂದು ಮಿಸೆಸ್ ಕ್ಲಿಫರ್ಡ್ ಹೇಳಿದರು. ಮ್ಯಾಗಿ ಮತ್ತು ನಾನು ಸೂಕ್ಷ್ಮವಾಗಿ ಇದನ್ನು ನೋಡಿದರೂ ಮತ್ತೆ ಮತ್ತೆ ಈ ಬಗ್ಗೆ ನಮಗೆ ಅಂಥದೇನೂ ಕಾಣಿಸಲಿಲ್ಲ. 'ಆದರೆ, ನಾವು ಫ್ರಾಂಕ್‌ನಿಂದ ಯಾವ ಸುದ್ದಿಯನ್ನು ಬಹಳ ದಿನಗಳಿಂದ ತಿಳಿದಿಲ್ಲ. ನೀವು ಒಬ್ಬ ಹಿಂದೂ ಆಗಿರುವುದರಿಂದ ಪ್ರಯತ್ನಿಸಿದರೆ ನಿಮ್ಮಿಂದ ಸಾಧ್ಯವಾಗಬಹುದು' ಎಂದು ಅವರು ಹೇಳಿದರು.

ನನಗೆ ಗೊತ್ತು, ಮೂಢನಂಬಿಕೆ ಭಾರತಕ್ಕಷ್ಟೆ ಸೀಮಿತವಾಗಿಲ್ಲ. ಆದರೆ, ಆ ತಾಯಿ ಮತ್ತು ಮಗಳಿಗೆ ನೋವನ್ನುಂಟು ಮಾಡಲು ನನಗೆ ಇಷ್ಟವಿರಲಿಲ್ಲ. ಅದು ಹತ್ತಾರು ತುಂಡುಗಳಿಂದ ಮಾಡಿದ್ದಾಗಿತ್ತು. ತಮ್ಮ ಮಗ ಫ್ರಾಂಕನು ಹೊಸ ಮತ್ತು ಚಮತ್ಕಾರಿಕ ವಸ್ತುವನ್ನು ದೂರದ ದೇಶ, ಕನಸಿನ ಭಾರತದಿಂದ ಕಳಿಸಿದ್ದಾನೆ ಎಂಬ ನಂಬಿಕೆ ಅವರಿಗಿತ್ತು. ಅವರ ನಂಬಿಕೆಯನ್ನು ನಾನು ಹೇಗೆ ತುಂಡರಿಸಲಿ.

ಮಿಸೆಸ್ ಕ್ಲಿಫರ್ಡ್ ಮತ್ತು ಮ್ಯಾಗಿಯ ಒತ್ತಾಸೆಯ ಮೇರೆಗೆ ನನ್ನ ಕೈಯಲ್ಲಿ ಉಂಗುರ ಹಿಡಿದು ಬಹಳ ಹೊತ್ತಿನ ತನಕ ದಿಟ್ಟಿಸಿ ನೋಡಿದೆ. ನಾನು ಉಂಗುರ ವಾಪಸ್ಸು ಕೊಡುತ್ತಾ 'ನನಗೆ ಏನೂ ಕಾಣುತ್ತಿಲ್ಲ' ಎಂದು ಹೇಳಿದೆ.

ತಾಯಿ ಮತ್ತು ಮಗಳಿಗೆ ನಿರಾಶೆಯಾಯಿತು. ವಿಷಯವನ್ನು ಬೇರೆ ಕಡೆಗೆ ತಿರುಗಿಸಲು ನಾನು, 'ಇಲ್ಲಿ ವಯಲಿನ್ ಇದೆಯಲ್ಲ, ಇದು ನಿನ್ನದೇ ಅಲ್ಲವಾ ಮ್ಯಾಗಿ?'

'ಹೌದು' ಮ್ಯಾಗಿ ಅದನ್ನು ಚೆನ್ನಾಗಿ ನುಡಿಸುತ್ತಾಳೆ, 'ಮ್ಯಾಗಿ, ನಮಗಾಗಿ ಅದನ್ನು ನುಡಿಸು' ಎಂದು ಮಿ. ಕ್ಲಿಫರ್ಡ್ ಹೇಳಿದರು.

'ಓ ಅಮ್ಮಾ' ಮ್ಯಾಗಿ ಪ್ರತಿಭಟಿಸುವ ರೀತಿಯಲ್ಲಿ ಅವಳ ಕಡೆ ನೋಡಿದಳು.

'ಮ್ಯಾಗಿ ಸ್ವಲ್ಪ ನುಡಿಸು, ನನಗೆ ವಯಲಿನ್ ಬಗ್ಗೆ ತುಂಬಾ ಆಸಕ್ತಿ ಇದೆ' ಎಂದು ಕೇಳಿಕೊಂಡೆ.